# ಇದೆ ಇಲ್ಲ ಎನ್ನುವರ ನಡುವೆ

ನಾವು ಉಪನಿಷತ್ತಿನ ವಿಚಾರಗಳು ಸಾಗುತ್ತಿರುವ ಹಾದಿಯನ್ನು ನೋಡುತ್ತಿದ್ದೇವೆ; ನಚಿಕೇತನೆಂಬ ಬಾಲಕನ ಕಥೆಯ ಗುಂಟ ನಡೆಯುತ್ತ. ಯಮನನ್ನು ಸಾವಿನ ದೇವತೆಯನ್ನು ಭೇಟಿಯಾದ ಬಾಲಕ ಯಮನಿಂದಲೇ ಮೂರು ವರಗಳನ್ನು ಅಯಾಚಿತವಾಗಿ ಪಡೆದಿದ್ದ. ಸಾವಿಗೆ ಪ್ರಜ್ಞಾಪೂರ್ವಕವಾಗಿ ಮುಖಾಮುಖಿಯಾಗುವುದೇ ಬದುಕಿಗೆ ಒಂದು ವರ ಇರಬಹುದು. ಅಥವಾ ಬದುಕೆನ್ನುವುದೇ ಸಾವು ನೀಡಿದ ವರ ಇರಬಹುದು! ಮೊದಲನೆಯ ವರದಲ್ಲಿ ನಚಿಕೇತ, ತನ್ನ ತಂದೆಯ ಅವಿಮರ್ಶಿತ ಕೋಪ ಉದ್ವೇಗಗೊಳ್ಳುವ ಸ್ವಭಾವ ಉಪಶಾಂತವಾಗಲಿ ಎಂದು ಯಮನನ್ನು ಕೇಳಿದ್ದ. ಸಾವಿನ ಬಳಿಗೆ ತನ್ನನ್ನು ಅಟ್ಟಿದ ತಂದೆಯ ಬಗೆಗೆ ಇನಿತೂ ಕೋಪವಿಲ್ಲದೆ ಆ ತಂದೆಗೆ ಕೋಪ ಕಳೆದು ನೆಮ್ಮದಿ ಬಂದೀತು ಹೇಗೆ ಎಂದೇ ಚಿಂತಿಸುತ್ತಿದ್ದ ಈ ಮಗನನ್ನು ನೋಡಿ ಯಮನಿಗೆ ಆಳವಾದ ಸಂತೋಷ ಉಕ್ಕಿತು. ಯಮ ಬಾಯ್ತುಂಬ ಹೇಳಿದನಂತೆ. ನೀನು ಬಯಸಿದಂತೆಯೇ ಆಗುವುದು. ನೀನು ಮನೆ ಬಿಟ್ಟಮೇಲೆ ಆ ನಿನ್ನ ತಂದೆ ತಾನಿದಕ್ಕೆ ಕಾರಣನಾದೆನಲ್ಲ ಎಂದು ತುಂಬ ನೊಂದುಕೊಂಡಿದ್ದ. ಇನ್ನು ಮುಂದೆ ಅವನ ಕೋಪ ಕಳೆಯುವುದು. ರಾತ್ರಿಗಳಲ್ಲಿ ಅವನು ಸುಖವಾಗಿ ನಿದ್ರಿಸುವನು. ಅವನ ಮಾತಿನಂತೆ ನನ್ನನ್ನು ಭೇಟಿಯಾಗಲು ಬಂದ ನೀನು ಮತ್ತೆ ಮನೆಗೆ ಮರಳುವೆ. ಆಗ ನಿನ್ನನ್ನು ಸಾವನ್ನು ಗೆದ್ದ ಮಗನನ್ನು ಮೃತ್ಯುಮುಖಾತ್ ಪ್ರಮುಕ್ತಂ ತಾನೂ ಹೊಸ ಜನ್ಮವನ್ನು ಪಡೆದವನ ಉಲ್ಲಾಸದಲ್ಲಿ ನಿನ್ನ ತಂದೆ ಬಾಗಿಲಲ್ಲಿ ಎದುರುಗೊಳ್ಳುವನು. ತಂದೆ ಮಗ ಮರಳಿ ಭೆಟ್ಟಿಯಾಗುವ ಆ ದೃಶ್ಯವನ್ನು ನೋಡಲು ಸ್ವಯಂ ಯಮನೇ ಉತ್ಸಾಹದಲ್ಲಿರುವನೋ ಎಂಬಂತಿವೆ ಯಮನ ಮಾತುಗಳು.

ನಚಿಕೇತ ಎರಡನೆಯ ವರವನ್ನು ಕೇಳಬೇಕು. ಹುಡುಗ ಸಹಜವಾಗಿ ತನ್ನ ತಂದೆ ತಂದೆಯ ಸಮಕಾಲೀನರು ಇವರೆಲ್ಲ ಬಹುವಾಗಿ ಆದರಿಸುವ ಕರ್ಮ ಮಾರ್ಗವನ್ನು ಕುರಿತು ಚಿಂತಿಸುತ್ತಿದ್ದ. ಕರ್ಮಠರು ಅಗ್ನಿಯನ್ನು ಕೇಂದ್ರವಾಗಿಟ್ಟುಕೊಂಡು ಯಜ್ಞಯಾಗಾದಿಗಳನ್ನು ನಡೆಸುವರು. ಪ್ರಕೃತಿಯಲ್ಲಿರುವ ಪರೋಕ್ಷ ಶಕ್ತಿಗಳಾದ ದೇವತೆಗಳನ್ನು ಈ ಮೂಲಕ ಒಲಿಸಿಕೊಳ್ಳುವರು. ಪರೋಕ್ಷ ಶಕ್ತಿಗಳ ಒಲವನ್ನು ಪುಣ್ಯ ಎಂದು ಕರೆಯುವರು. ಈ ಪುಣ್ಯದ ಬಲದಿಂದ ಸ್ವರ್ಗವನ್ನು ಪಡೆಯುವರು! ಇದು ಕರ್ಮದ ನಡೆ. ಕರ್ಮ ಮಾರ್ಗ. ಬಹುಜನ ಈ ದಾರಿಯಲ್ಲಿ ನಡೆಯುವರಾಗಿ ಇದೊಂದು ದೊಡ್ಡ ಪರಂಪರೆಯೇ ಆಗಿ ಬೆಳೆದಿದೆ. ಈ ಕರ್ಮ ಮಾರ್ಗದ ಕೇಂದ್ರದಲ್ಲಿರುವುದು ಅಗ್ನಿ.

ಅಗ್ನಿಯು ಎರಡು ಕಲ್ಲುಗಳ ಚಕಮಕಿ ಕಲ್ಲುಗಳ ಒಳಗೂ ಇದೆ. ಅಡಗಿ ಕಿಡಿ ಕುಳಿತಿದೆ. ಮರದ ಎರಡು ತುಂಡುಗಳ ಒಳಗೂ ಇದೆ. ಅಂದರೆ ಪರೋಕ್ಷವಾಗಿಯೂ ಇದೆ. ಕಲ್ಲುಗಳ ಚಕಮಕಿಯಲ್ಲಿ, ಮರದ ತುಂಡುಗಳ ತಿಕ್ಕಾಟದಲ್ಲಿ ಅಗ್ನಿ ಪ್ರಕಟವಾಗುತ್ತದೆ. ಅಂದರೆ ಪ್ರತ್ಯಕ್ಷವಾಗಿಯೂ ಇದೆ. ಹೀಗೆ ಪ್ರತ್ಯಕ್ಷ ಪರೋಕ್ಷ ಎರಡೂ ಆಗಿರುವುದರಿಂದ ಅಗ್ನಿಯು ಪರೋಕ್ಷರಾದ ದೇವತೆಗಳ ಒಲವನ್ನು ಗಳಿಸಿಕೊಡಬಲ್ಲ ಮಾಧ್ಯಮವಾಗಿದೆ. ಅಂದರೆ, ಪ್ರತೀಕವಾಗಿದೆ. ಆದುದರಿಂದ ಕರ್ಮಮಾರ್ಗವೆಂದರೆ ಇನ್ನೊಂದು ರೀತಿಯಲ್ಲಿ ಅಗ್ನಿವಿದ್ಯೆಯೂ ಹೌದು. ಈ ಅಗ್ನಿವಿದ್ಯೆಯ ರಹಸ್ಯವನ್ನು ನನಗೆ ತಿಳಿಸುವೆಯಾ ಎಂದು ನಚಿಕೇತ ಎರಡನೆಯ ವರವನ್ನು ಯಮನಲ್ಲಿ ಕೇಳುವನು.

ಯಮನಿಗೆ ಮತ್ತೆ ತುಂಬ ಸಂತೋಷವಾಯಿತು. ಹುಡುಗ ತೆರೆದ ಮನಸ್ಸಿನವನಾಗಿದ್ದಾನೆ. ಕರ್ಮಮಾರ್ಗವನ್ನು ಕುರುಡಾಗಿ ನಿರಾಕರಿಸುತ್ತಿಲ್ಲ. ತನ್ನ ತಂದೆ; ಕರ್ಮಮಾರ್ಗವನ್ನು ಅನುಸರಿಸುವವನಾಗಿಯೂ ಇನ್ನೂ ಮಾಗಿದ ವ್ಯಕ್ತಿಯಾಗಿಲ್ಲ ಎಂದೂ ತಿಳಿದೂ, ಮಗ ಕುರುಡಾಗಿ ನಿರಾಕರಿಸುತ್ತಿಲ್ಲ.

ಅಂದರೆ ಯಾವುದೇ ಮಾರ್ಗದ ಅನುಸರಣೆಯೂ ಕುರುಡಾಗಿ ನಡೆಯಬಹುದು; ನಿರಾಕರಣೆಯೂ ಕುರುಡಾಗಿ ನಡೆಯಬಹುದು ಎಂಬುದನ್ನು ತಿಳಿದವನಾಗಿದ್ದಾನೆ. ಇಂಥ ತೆರೆದ ಮನಸ್ಸೇ ಅಲ್ಲವೆ ಶೋಧಿಸಬಲ್ಲ ಮನಸ್ಸು! ರಹಸ್ಯವನ್ನು ಭೇದಿಸಬಲ್ಲ ಮನಸ್ಸು! ಯಮ, ಸಾವಿನ ಅಧಿದೈವವಾಗಿ, ಸಾವಿನಲ್ಲಿ ಒಂದು ಹಂತ ಕೊನೆಗಾಣುವ, ಬದುಕೆಂಬ ಕರ್ಮಪಥದ ತಿರುಳೇನು ಎಂಬುದನ್ನು ನಚಿಕೇತನಿಗೆ ತುಂಬು ಪ್ರೀತಿಯಿಂದ ವಿವರಿಸಿದನಂತೆ. ಸಾವಿನಿಂದ ಕರ್ಮದ ಪಾಠವಾಯಿತು! ಈ ಪಾಠಕ್ಕೆ ನಾಚಿಕೇತಪಾಠ ಅಗ್ನಿವಿದ್ಯೆಯನ್ನೂ ಕುರಿತಾದುದರಿಂದ ನಾಚಿಕೇತಾಗ್ನಿ ಎಂದೇ ಹೆಸರಾಯಿತು. ಯಮನ ಪಾಠ ಅಥವಾ ಯಮಾಗ್ನಿ ವೈವಸ್ವತಾಗ್ನಿ ಎಂದಲ್ಲ! ನಾಚಿಕೇತಾಗ್ನಿ ಎಂದು ಗುರುವಿನ ಹೆಸರಲ್ಲ; ಶಿಷ್ಯನ ಹೆಸರು! ರಹಸ್ಯವನ್ನು ತನ್ನಲ್ಲೇ ನಿಡುಗಾಲ ಹೊತ್ತು ಇದನ್ನು ಯಾರಿಗುಸುರಲಿ ಎಂದು ಹಂಬಲಿಸುತ್ತಿದ್ದ ಗುರುವನ್ನು, ಆ ರಹಸ್ಯವನ್ನು ಕುರಿತೇ ಪ್ರಶ್ನಿಸಿ ಗುರುವನ್ನು ನಿರಾಳವಾಗಿಸಿದ ಶಿಷ್ಯನ ಹೆಸರು!

ಈಗ ಮೂರನೆಯ ವರದ ಸರದಿ. ಹುಡುಗ ತನಗಾಗಿ ಏನನ್ನೂ ಕೇಳಿಲ್ಲ, ಪ್ರಾಯಃ ಕೇಳುವವನೂ ಅಲ್ಲ. ಆದುದರಿಂದಲೇ ಈ ಹುಡುಗ ಇನ್ನೇನು ಕೇಳುವುದಕ್ಕಿರಬಹುದು ಎನ್ನುವ ಸೂಕ್ಷ್ಮ ಕುತೂಹಲವೊಂದು ಯಮನಿಗೂ ಹುಟ್ಟಿಕೊಂಡಿದೆ. ಅಲ್ಲದೆ, ನಚಿಕೇತ ಆದಷ್ಟು ಬೇಗನೆ ತನ್ನ ಮರ್ತ್ಯಲೋಕದ ಮನೆಗೆ ಮರಳಬೇಕೆನ್ನುವುದೇ ಯಮನ ಬಯಕೆಯಾಗಿರುವಂತಿದೆ. ಹಿಂತೆರಳಿದಾಗ ತಂದೆಯೇ ತನ್ನನ್ನು ಎದುರುಗೊಳ್ಳುವ ಚಿತ್ರವನ್ನು ನಚಿಕೇತನಿಗೆ ಯಮ ವಿವರಿಸಿರುವುದೂ ಇದೇ ಕಾರಣಕ್ಕೆ. ಏಕೆಂದರೆ ಹೆಚ್ಚು ಹೊತ್ತು ಸಾವಿನ ಸಮ್ಮುಖದಲ್ಲಿ ಜೀವ, ನೇರ ನಿಲ್ಲಬಾರದು. ಬದುಕಿನಲ್ಲಿ ಸಾವು ಪರೋಕ್ಷವಾಗಿರುವ ಅಂದರೆ ಮರೆಯಲ್ಲಿರುವ ಸಂಗತಿ. ಅದು ಹಾಗೇ ಇರಲಿ. ಅದೇ ನಿಸರ್ಗನಿಯಮ. ನೇರವಾಗಿ ನಿಂತು ಸಾವಿನ ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಇನ್ನೇನು ಕಾಣುತ್ತದೆಯೋ! ಬದುಕಬೇಕೆನ್ನುವ ಬಯಕೆಯೇ ಕಳೆದು ಹೋದರೆ! ಹಾಗೆ ಕಳೆದು ಹೋಗಬಾರದೆಂದೇ ಸಾವು ಮರೆಯಲ್ಲಿದೆ!

ಆದರೆ, ಈ ಎಲ್ಲ ಲೆಕ್ಕಾಚಾರಗಳನ್ನು ಮೀರಿದ ಪ್ರಶ್ನೆಯೊಂದನ್ನು ಈಗ ನಚಿಕೇತ, ಮೂರನೆಯ ವರವಾಗಿ ಕೇಳಿದನಂತೆ. ಅದೇನೆಂದರೆ ಸಾವಿನ ಅನಂತರ ಏನು ಎನ್ನುವ ಕಾಡುವ ಪ್ರಶ್ನೆ. ಯೇ ಯಂ ಪ್ರೇತೇವಿಚಿಕಿತ್ಸಾ ಮನುಷ್ಯೇ! ಅಸ್ತೀತ್ಯೇಕೇ ನಾಯಮಸ್ತೀತಿ ಚೈಕೇ! ಸಾವೆನ್ನುವುದು ನಿಜ. ಖಚಿತ. ಇದು ಬದುಕಿನದೇ ನಿಜ. ಈ ಬಗೆಗೆ ಗೊಂದಲವಿಲ್ಲ. ಆದರೆ ಮನುಷ್ಯ ಜೀವಕ್ಕೆ ಈ ನಿಜವನ್ನು ಸಹಜವಾಗಿ ಒಪ್ಪುವ ಎದೆಗಾರಿಕೆ ಇದೆಯೋ ಇಲ್ಲವೋ ಆ ಮಾತು ಬೇರೆ. ಆದರೆ ಸಾವಿನ ಅನಂತರ ಏನು? ಸಾವೆನ್ನುವುದು ಹಾದಿಯ ಕೊನೆಯಲ್ಲ. ಅದೊಂದು ತಿರುವು ಮಾತ್ರ. ಮುಂದೆಯೂ, ಬೇರೆಯದೇ ರೀತಿಯ ಬದುಕಿನ ಹಾದಿ ಹಬ್ಬಿದೆ. ಅಂದರೆ ಸಾವಿನ ಅನಂತರವೂ ಬದುಕು ಇದೆ. ಹೀಗೆನ್ನುವರು ಕೆಲವರು. ಅಸ್ತಿ ಇತಿ ಏಕೇ .

ಈ ಅಭಿಪ್ರಾಯಕ್ಕೆ ವಿರುದ್ಧವಾಗಿ, ಸಾವೆನ್ನುವುದು ಅಂತಿಮ. ಬದುಕೆನ್ನುವುದು ದಾರಿಯಾದರೆ ಸಾವೆನ್ನುವುದು ಗುರಿ. ಅಲ್ಲಿಗೆ ಮುಗಿಯಿತು. ಎಲ್ಲವನ್ನೂ ರೂಪಕವಾಗಿ ನೋಡಿದರೆ, ಊಹಾಪೋಹಗಳಿಗೆ ಕೊನೆಯೇ ಇಲ್ಲ. ಅಥವಾ ಕೊನೆಯಾಗಬಾರದು ಎನ್ನುವ ಆಸೆಯೇ, ಸಾವಿನ ಅನಂತರವೂ ಬದುಕಿದೆ, ಆ ಬದುಕನ್ನು ಅನುಭವಿಸುವ ಆತ್ಮ; ಒಂದಿದೆ ಇತ್ಯಾದಿ ಕಲ್ಪನೆಗಳನ್ನು ಮುಂದೊಡ್ಡುತ್ತಿದೆ ಎನ್ನಬಹುದು. ಹೀಗೆ ವಾದಿಸುವವರೂ ಇದ್ದಾರೆ. ನ ಅಯಂ ಅಸ್ತೀತಿ ಏಕೇ. ಓ ಸಾವಿನ ದೈವವೇ ನಿಜ ಏನು? ನೀನೇ ಹೇಳಬೇಕು.

■ ತೋಷ

## ಮಾತೇ ಮುತ್ತು

★ ಸಾಯುವುದು ಏನೂ ಅಲ್ಲ; ಆದರೆ ಬದುಕದೆ ಇರುವುದು ಭಯಾನಕ.

ವಿಕ್ಟರ್ ಹ್ಯೂಗೊ

★ ಅತಿಬುದ್ಧಿವಂತರು ಸಂತೋಷವಾಗಿರುವುದು ಬಹಳ ಕಡಿಮೆ.

ಅರ್ನೆಸ್ಟ್ ಹೆಮಿಂಗ್ವೇ

★ ಇನ್ನೊಬ್ಬರ ಬಗ್ಗೆ ಗೊತ್ತಿರುವವನು ಬುದ್ಧಿವಂತ. ತನ್ನ ಬಗ್ಗೆ ತಾನೇ ತಿಳಿದುಕೊಂಡವನು ಜ್ಞಾನಿ.

★ ಜೀವನಪೂರ್ತಿ ಸಂತೋಷವಾಗಿರುವುದೆಂದರೆ ಅದೊಂದು ನರಕವೇ ಸರಿ. ಮನುಷ್ಯರಾರೂ ಹಾಗಿರಲು ಸಾಧ್ಯವಿಲ್ಲ.

ಜಾರ್ಜ್ ಬರ್ನಾರ್ಡ್ ಷಾ

★ ಜೀವನವೆಂದರೆ ಪರಿಣಾಮಗಳನ್ನು ಉಂಟು ಮಾಡುವುದು; ಲಾಭ ಉಂಟು ಮಾಡುವುದಲ್ಲ.

ಕೆವಿನ್ ಕ್ರೂಸ್

★ ಪ್ರತಿಯೊಂದು ಮಗುವೂ ಒಬ್ಬ ಕಲಾವಿದ. ಬೆಳೆದ ಬಳಿಕ ಆತ ಕಲಾವಿದನಾಗಿಯೇ ಉಳಿಯುವುದು ಹೇಗೆ ಎನ್ನುವುದು ನಿಜವಾದ ಸಮಸ್ಯೆ.

ಪಾಬ್ಲೊ ಪಿಕಾಸೊ

★ ಜೀವನದಲ್ಲಿ ಎರಡು ಶ್ರೇಷ್ಠ ದಿನಗಳಿವೆ. ಒಂದು ನೀವು ಹುಟ್ಟಿದ ದಿನ. ಇನ್ನೊಂದು ಹುಟ್ಟಿದ್ದು ಏಕೆಂದು ಗೊತ್ತಾದ ದಿನ.

ವಿಲಿಯಂ ಬರ್ಕ್‌ಲೇ